(29)

(7)

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ರಾಮೋಜಿ ಗೌಡ ಇವರು ನಿಯಮ 330 ರಡಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.**

**ವಿಷಯ**

ದಿನಾಂಕ: 24-07-2024ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ಪ್ರಾಥಮಿಕ ಶಾಲಾ ಶಿಕ್ಷಕರಿಂದ (ಪಿ ಎಸ್ ಟಿ)ಜಿಪಿಟಿ ಶಿಕ್ಷಕರಾಗಿ ಬಡ್ತಿ ನೀಡುವ ಬಗ್ಗೆ ಉತ್ತರ ನೀಡಿರುವುದು ಸರಿಯಷ್ಟೆ ಪ್ರಾಥಮಿಕ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಾ ಪದವಿಯನ್ನು ಪೂರೈಸಿರುವ 58 ಸಾವಿರಕ್ಕೂ ಹೆಚ್ಚು ಜನ ಶಿಕ್ಷಕರಿಗೆ ಕಳೆದ 25 ವರ್ಷಗಳಿಂದ ಒಂದರಿಂದ ಎಂಟನೇ ತರಗತಿಗೆ ಪಾಠವನ್ನು ಮಾಡುತ್ತಿದ್ದರೂ ಕೂಡ ಅವರ ಹೆಚ್ಚಿನ ವಿದ್ಯಾರ್ಹತೆಗಳನ್ನು ಪದವಿಗಳನ್ನು ಗೌರವಿಸದೆ ಅವರಿಗೆ ಯಾವುದೇ ರೀತಿಯ ಆರ್ಥಿಕ ಮತ್ತು ಸೇವಾ ಹಿರಿತನದ ಸೌಲಭ್ಯಗಳನ್ನು ಅನ್ಯಾಯವಾಗುತ್ತಿರುವುದನ್ನು ಗಮನಿಸಿ ಸರ್ಕಾರ ಸಮಿತಿಯನ್ನು ರಚಿಸಿ ಒಂದು ತಿಂಗಳ ಒಳಗಾಗಿ ವರದಿಯನ್ನು ಪಡೆಯಬೇಕೆಂದು ನಿರ್ದೇಶನ ನೀಡಿದ್ದರೂ ಕೂಡ ಆರು ತಿಂಗಳು ಗತಿಸುತ್ತಾ ಬಂದರೂ ಇನ್ನೂ ಯಾವುದೇ ಪರಿಹಾರ ದೊರಕಿರುವುದಿಲ್ಲ. ಜೊತೆಗೆ ಕಳೆದ ಎರಡು ಮೂರು ವರ್ಷಗಳಿಂದ ಸೇವೆಯಲ್ಲಿ ಹಿರಿತನ ಹೊಂದಿರುವ ಮುಖ್ಯ ಗುರುಗಳಿಗೆ, ಶಿಕ್ಷಕರಿಗೆ ಹಿರಿಯ ಮುಖ್ಯ ಗುರುಗಳಿಗೆ ಬಡ್ತಿಯನ್ನು ಪಡೆಯದೆ ನಿವೃತ್ತಿಯಾಗುತ್ತಿರುವುದು ದುಃಖದ ಸಂಗತಿ ಆಗಿದ್ದು ಇವುಗಳಿಗೆ ಕಾಲಮಿತಿಯಲ್ಲಿ ನ್ಯಾಯ ಒದಗಿಸಬೇಕೆಂದು ತಮ್ಮಲ್ಲಿ ಕೋರುತ್ತೇನೆ.

**ಉತ್ತರ**

1) ರಾಷ್ಟ್ರೀಯ ಶಿಕ್ಷಣ ಶಿಕ್ಷಕರ ಪರಿಷತ್ತು (NCTE) ಪ್ರಾಥಮಿಕ ಶಾಲೆಗಳಲ್ಲಿ 1 ರಿಂದ 5ನೇ ತರಗತಿ ಮತ್ತು 6 ರಿಂದ 8ನೇ ತರಗತಿಗಳಿಡಗೆ ಬೋಧಿಸುವ ಶಿಕ್ಷಕರಿಗೆ ಪ್ರತ್ಯೇಕ ವಿದ್ಯಾರ್ಹತೆಯನ್ನು ನಿಗದಿಪಡಿಸಿರುತ್ತದೆ. 1 ರಿಂದ 5ನೇ ತರಗತಿ ಬೋಧಿಸುವ ಶಿಕ್ಷಕರಿಗೆ ಪಿಯುಸಿ ಮತ್ತು ಟಿಸಿಹೆಚ್ / ಡಿ.ಇಡಿ ಮತ್ತು 6 ರಿಂದ 8ನೇ ತರಗತಿಗೆ ಬೋಧಿಸುವ ಶಿಕ್ಷಕರಿಗೆ ಪದವಿ ಮತ್ತು ಟಿಸಿಹೆಚ್ / ಡಿ.ಇಡಿ ವಿದ್ಯಾರ್ಹತೆಯನ್ನು ನಿಗದಿಪಡಿಸಿರುತ್ತದೆ.

2) ಆರ್‌ಟಿಇ ಕಾಯ್ದೆ 2009ರ ಕಲಂ 12(1) ರನ್ವಯ ಎನ್‌ಸಿಟಿಇ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿದ ಶಿಕ್ಷಕರನ್ನು ಶಾಲೆಗಳಿಗೆ ಒದಗಿಸುವುದು ಕಡ್ಡಾಯವಾಗಿರುತ್ತದೆ.

3) ಆರ್‌ಟಿಇ ಕಾಯ್ದೆ ಮತ್ತು ಎನ್‌ಸಿಟಿಇ ಮಾರ್ಗಸೂಚಿಯಂತೆ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತಂದು 2017ರಲ್ಲಿ ಹೊಸ ನಿಯಮಗಳನ್ನು ರಚಿಸಿ ಈ ಕೆಳಗಿನಂತೆ ವೃಂದಗಳನ್ನು ರಚಿಸಲಾಗಿರುತ್ತದೆ.

| ವೃಂದ | ಬೋಧಿಸುವ ತರಗತಿ | ನಿಗಧಿಪಡಿಸಿದ ವಿದ್ಯಾರ್ಹತೆ |
|---|---|---|
| ಪ್ರಾಥಮಿಕ ಶಾಲಾ ಶಿಕ್ಷಕರು | 1 ರಿಂದ 5 | ಪಿಯುಸಿ ಮತ್ತು ಟಿ.ಸಿ.ಹೆಚ್/ ಡಿ.ಇಡಿ |
| ಪದವೀಧರ | 6 ರಿಂದ 8 | ಪದವಿ ಮತ್ತು |

| | | |
|---|---|---|
| ಪ್ರಾಥಮಿಕ ಶಿಕ್ಷಕರು | | ಟಿ.ಸಿ.ಹೆಚ್/ ಡಿ.ಇಡಿ |

4) 2016ಕ್ಕಿಂತ ಪೂರ್ವದಲ್ಲಿ ಆ ಸಂದರ್ಭದಲ್ಲಿ ಅಸ್ತಿತ್ವದಲ್ಲಿದ್ದ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಪಿ.ಯು.ಸಿ ಮತ್ತು ಟಿ.ಸಿ.ಹೆಚ್/ ಡಿ.ಇಡಿ ವಿದ್ಯಾರ್ಹತೆ ಆಧರಿಸಿ ನೇಮಕಗೊಂಡಿದ್ದ ಪ್ರಾಥಮಿಕ ಶಾಲಾ ಸಹ ಶಿಕ್ಷಕರನ್ನು ಪ್ರಾಥಮಿಕ ಶಾಲಾ ಶಿಕ್ಷಕರು(ಪಿಎಸ್‌ಟಿ) ವೃಂದದಲ್ಲಿರಿಸಲಾಗಿರುತ್ತದೆ.

5) 2016ರ ಪೂರ್ವದಲ್ಲಿ ಯಾವುದೇ ಶಿಕ್ಷಕರನ್ನು 6 ರಿಂದ 7/8 ತರಗತಿಗಳಿಗೆ ಮಾತ್ರ ಬೋಧಿಸಲು ನೇಮಕ ಮಾಡಿಕೊಂಡಿರುವುದಿಲ್ಲ.

6) 2017ರಲ್ಲಿ ರಚಿಸಲಾಗಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಭವಿಷ್ಯವರ್ತಿಯಾಗಿ ಜಾರಿಗೆ ಬರುವಂತೆ (With prospective effect) ಜಾರಿಗೊಳಿಸಿದ್ದು, ಪೂರ್ವಾನ್ವಯವಾಗಿ ಜಾರಿಗೊಳಿಸಿರುವುದಿಲ್ಲ.

7) 2016ಕ್ಕಿಂತ ಪೂರ್ವದಲ್ಲಿ ನೇಮಕಗೊಂಡಿರುವ ಶಿಕ್ಷಕರ ವೇತನ, ವಾರ್ಷಿಕ ವೇತನ ಬಡ್ತಿ ಒಳಗೊಂಡಂತೆ ಯಾವುದೇ ಸೇವಾ ಸೌಲಭ್ಯಗಳಲ್ಲಿ ಬದಲಾವಣೆ ಮಾಡಿರುವುದಿಲ್ಲ ಮತ್ತು ಯಾವುದೇ ಶಿಕ್ಷಕರನ್ನು ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಿಂದ ಹಿಂಬಡ್ತಿಗೊಳಿಸಿರುವುದಿಲ್ಲ.

8) ಪಿಎಸ್‌ಟಿ ವೃಂದದಿಂದ ಜಿಪಿಟಿ ವೃಂದಕ್ಕೆ ಪ್ರಸ್ತುತ 33%ರಷ್ಟು ಹುದ್ದೆಗಳಿಗೆ ಪರೀಕ್ಷೆ ಮೂಲಕ ಮುಂಬಡ್ತಿಗೆ ಅವಕಾಶ ಕಲ್ಪಿಸಲಾಗಿರುತ್ತದೆ ಆದರೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ಪರೀಕ್ಷೆ ಮೂಲಕ ಮುಂಬಡ್ತಿ ನೀಡುವುದನ್ನು ವಿರೋಧಿಸಿ ಈವರೆಗೂ ಸದರಿ ಮುಂಬಡ್ತಿ ಅವಕಾಶವನ್ನು ಬಳಸಿಕೊಂಡಿರುವುದಿಲ್ಲ.

9) ಪ್ರಸ್ತುತ ಇರುವ ನಿಯಮಗಳಲ್ಲಿ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ಹುದ್ದೆಯ ಬಡ್ತಿಗೆ ಪಿಎಸ್‌ಟಿ ವೃಂದಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿರುತ್ತದೆ ಇದನ್ನು ಪ್ರಶ್ನಿಸಿ ಜಿಪಿಟಿ ವೃಂದದ ಶಿಕ್ಷಕರು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಪ್ರಕರಣ ದಾಖಲಿಸಿದ್ದು, ಮಾನ್ಯ ನ್ಯಾಯ ಮಂಡಳಿಯು ಮುಖ್ಯ ಶಿಕ್ಷಕರ ಹುದ್ದೆಯ ಬಡ್ತಿಗೆ ಜಿಪಿಟಿ ವೃಂದಕ್ಕೂ ಅವಕಾಶ ಕಲ್ಪಿಸುವಂತೆ ಆದೇಶಿಸಿರುತ್ತದೆ. ಮಾನ್ಯ ನ್ಯಾಯಮಂಡಳಿಯ ಆದೇಶವನ್ನು ಅನುಷ್ಠಾನಗೊಳಿಸುವ ಕುರಿತು ಪರಿಶೀಲಿಸಲಾಗುತ್ತಿದೆ. ಇದರಿಂದ ಪಿಎಸ್‌ಟಿ ವೃಂದದಿಂದ ಮುಖ್ಯ ಶಿಕ್ಷಕರ ವೃಂದಕ್ಕೆ ಮುಂಬಡ್ತಿ ನೀಡಲು ಸಾಧ್ಯವಾಗಿರುವುದಿಲ್ಲ.

10) ಮಾನ್ಯ ಮುಖ್ಯಮಂತ್ರಿಯವರ ನಿರ್ದೇಶನದಂತೆ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಬೇಡಿಕೆಗಳ ಕುರಿತು ಕೂಲಂಕಷವಾಗಿ ಪರಿಶೀಲಿಸಿ ಸಮಗ್ರ ವರದಿ ನೀಡಲು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ: 23-09-2024ರಂದು ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಸಮಿತಿಯು ಈಗಾಗಲೇ ಎರಡು ಬಾರಿ ಸಭೆ ನಡೆಸಿದ್ದು, ಸಂಘದ ಬೇಡಿಕೆಗಳ ಸಾಧಕ-ಬಾಧಕಗಳ ಕುರಿತು ಮತ್ತು ನಿಯಮಗಳಲ್ಲಿರುವ ಅವಕಾಶಗಳ

ಕುರಿತು ಪರಿಶೀಲಿಸುತ್ತಿದೆ. ಸಮಿತಿಯ ವರದಿ ಸ್ವೀಕೃತಗೊಂಡ ನಂತರ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗುವುದು.

**ಸಂಖ್ಯೆ: ಇಪಿ 22 ಪಿಎಂಎ 2025**

**(ಎಸ್. ಮಧುಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು